### ದೃಶ್ಯ 1

2016. ಭಾರತದ ಸೇನಾ ತುಕಡಿಗಳು 'ಗಡಿ ನಿಯಂತ್ರಣ ರೇಖೆ'ಯಲ್ಲಿ ಪಾಕಿಸ್ತಾನದ ವಿರುದ್ಧ ನಡೆಸಿದ ಸರ್ಜಿಕಲ್ ಸ್ಟ್ರೈಕ್ ಯಶಸ್ವಿಯಾಗಿತ್ತು. ಆ ಕಾರ್ಯಾಚರಣೆ ಮಾಡಿದ ಅದ್ಭುತ ಸಿನಿಮಾ 'ಉರಿ' ಕಳೆದ ವರ್ಷ ಬಿಡುಗಡೆಯಾಗಿ ಬಾಕ್ಸ್ ಆಫೀಸ್‌ನಲ್ಲಿ ಯಶಸ್ವಿಯೂ ಆಗಿತ್ತು. ಸಿನಿಮಾದಲ್ಲಿ ಭಾರತದ ತಂಡ ಉಗ್ರಗಾಮಿಗಳ ಅಡಗುತಾಣ ಪತ್ತೆ ಹಚ್ಚಿ ಅಲ್ಲಿನ ಛಾಯಾಚಿತ್ರ ರವಾನಿಸಲು 'ಗರುಡ' ಎಂಬ ಡ್ರೋನ್ ಬಳಸುತ್ತಾರೆ. ಅದು ಪಕ್ಷಿಯ ಆಕಾರದಲ್ಲಿದ್ದು, ಉಗ್ರರ ಅಡಗುತಾಣಗಳ ಮೇಲೆ ಹಾರಿ ಅಲ್ಲಿನ ಸ್ಪಷ್ಟ ಚಿತ್ರವನ್ನು ಕಳಿಸುತ್ತದೆ. ಅದನ್ನಾಧರಿಸಿ ನಮ್ಮ ಸೇನೆ ತಾಣದ ಮೇಲೆ ದಾಳಿ ಮಾಡಿ ಅವರನ್ನು ಹತ್ಯೆಗೈಯುತ್ತದೆ. ಚಿತ್ರದಲ್ಲಿ ಬಳಸಲಾದ ಡ್ರೋನ್‌ನ ಹೆಸರು ರೊಬರ್ಡ್ (Ro Bird). ಅದನ್ನು ನೆದರ್‌ಲೆಂಡ್‌ನ ತಂತ್ರಜ್ಞರು ನಿರ್ಮಿಸಿದ್ದರು ಮತ್ತು ಚಿತ್ರೀಕರಣದ ಸಮಯದಲ್ಲಿ ಹಾಜರಿದ್ದು ಅದರ ಇಡೀ ಹಾರಾಟವನ್ನು ನಿಯಂತ್ರಿಸಿ ಚಿತ್ರೀಕರಣಕ್ಕೆ ಸಹಾಯ ಮಾಡಿದ್ದರು. ಭಾರತದ ಸೇನಾ ಸಂಬಂಧಿತ ಚಲನಚಿತ್ರಗಳಲ್ಲಿ ಮೊಟ್ಟಮೊದಲ ಬಾರಿಗೆ ಡ್ರೋನ್‌ನ ಪರಿಣಾಮಕಾರಿ ಬಳಕೆಯನ್ನು ನೋಡಿದ ವೀಕ್ಷಕರು, ತುಂಬಾ ಖುಷಿಪಟ್ಟಿದ್ದರು.

### ದೃಶ್ಯ 2

2012ರಲ್ಲಿ ತೆರೆಕಂಡ ಹಾಲಿವುಡ್ ಸಿನಿಮಾ 'ಸ್ಕೈಫಾಲ್'. ಸಿನಿಮಾದಲ್ಲಿ ಜೇಮ್ಸ್ ಬಾಂಡ್ ಪಾತ್ರಧಾರಿ ಡೇನಿಯಲ್ ಕ್ರೇಗ್ ಉಗ್ರಗಾಮಿಯೊಬ್ಬನನ್ನು ಬೈಕ್‌ನಲ್ಲಿ ಬೆನ್ನಟ್ಟುವ ದೃಶ್ಯವಿದೆ. ಇಸ್ತಾಂಬುಲ್‌ನ ಗ್ರ್ಯಾಂಡ್ ಬಜಾರ್‌ನ ಮನೆ–ಕಟ್ಟಡಗಳ ಮಾಳಿಗೆಯ ಮೇಲೆ ನಡೆಯುವ ಬೈಕ್ ಚೇಸಿಂಗ್ ದೃಶ್ಯ ಸಿನಿಮಾ ವೀಕ್ಷಣೆಯ ಅನುಭವವನ್ನೇ ಬದಲಾಯಿಸಿದ್ದಲ್ಲದೆ, ಹಾಲಿವುಡ್ ಸಿನಿಮಾಗಳ ಚಿತ್ರೀಕರಣ ತಂತ್ರವನ್ನೇ ಹೊಸ ಎತ್ತರಕ್ಕೆ ಕೊಂಡೊಯ್ಯಿತು. ಸಿನಿಮಾದ ಆರಂಭದಲ್ಲೇ ಬರುವ ಮೂರು ನಿಮಿಷಗಳ ಚೇಸಿಂಗ್ ಅನ್ನು ಮೈನವಿರೇಳುವಂತೆ ಚಿತ್ರೀಕರಿಸಿದ್ದು ಡ್ರೋನ್ ಕ್ಯಾಮೆರಾ ಮೂಲಕ. ಈ ದೃಶ್ಯವನ್ನು ಚಿತ್ರೀಕರಿಸಿದ್ದ 'ಫ್ಲೈಯಿಂಗ್ ಕ್ಯಾಮ್'ಗೆ ವೈಜ್ಞಾನಿಕ ಹಾಗೂ ತಂತ್ರಜ್ಞಾನ ವಿಭಾಗದಲ್ಲಿ ಆಸ್ಕರ್ ಪ್ರಶಸ್ತಿಯೂ ಬಂತು! ಇದಾದ ನಂತರ ಬಂದ 'ದಿ ಎಕ್ಸ್‌ಪೆಂಡೆಬಲ್ಸ್', 'ಜುರಾಸಿಕ್ ವರ್ಲ್ಡ್', 'ಸ್ಪೆಕ್ಟರ್' ಮುಂತಾದ ಚಿತ್ರಗಳಲ್ಲಿ ಡ್ರೋನ್ ಬಳಕೆ ಮಾಡಿದಾಗ ದೃಶ್ಯ ಶ್ರೀಮಂತಿಕೆಯ ಹೊಸ ಪರಿಭಾಷೆಯೇ ಮೂಡಿಬಂತು.

### ದೃಶ್ಯ 3

ಅದು ಸಿಂಗಪೂರ್ ಮೂಲದ 'ಟಿಂಬ್ರೆ' ಹೆಸರಿನ ಹೋಟೆಲ್ ಸಮೂಹ ಮಲೇಷ್ಯಾದಲ್ಲಿ ನಡೆಸುತ್ತಿರುವ ಹೋಟೆಲ್. ಅಲ್ಲಿ ಯಾರೇ ತಿನಿಸು ಅಥವಾ ಪಾನೀಯ ಆರ್ಡರ್ ಮಾಡಿದರೂ ಅದು ನೀವು ಕುಳಿತಿರುವ ಟೇಬಲ್ ಬಳಿ ಬರುವುದು ಡ್ರೋನ್‌ನ ಮೂಲಕವೇ. ಹೋಟೆಲ್‌ನಲ್ಲಿ ಕೆಲಸ ಮಾಡಲು ಜನ ಸಿಗದಿದ್ದುದರಿಂದ ಡ್ರೋನ್‌ಗಳನ್ನು ಬಳಸಿ ಗ್ರಾಹಕರಿಗೆ ಸೇವೆ ನೀಡಲಾಗುತ್ತಿದ್ದು, ಡ್ರೋನ್ ತಂತ್ರಜ್ಞಾನ ಆಧುನಿಕ ಜೀವನವನ್ನು ಹೇಗೆ ಬದಲಾಯಿಸಬಲ್ಲದು ಎಂಬುದಕ್ಕೆ ಸಾಕ್ಷಿಯಾಗಿದೆ.

### ಘಟನೆ 1

ಜನವರಿ 3, 2020. ಇರಾಕ್‌ನ ಬಗ್ದಾದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಅಮೆರಿಕದ 'USMQ9 ರೀಪರ್' ಡ್ರೋನ್ ಹಠಾತ್ತಾಗಿ ಎರಗಿ ಇರಾಕ್‌ನ ಇಸ್ಲಾಮಿಕ್

